# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ :** ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು, ಸ.ನಂ. 96 ರಲ್ಲಿ 3ಎ–00ಗು, ಸ.ನಂ. 98 ರಲ್ಲಿ 3ಎ–00ಗು, ಸ.ನಂ. 101 ರಲ್ಲಿ 3ಎ–00ಗು, ಸ.ನಂ. 102 ರಲ್ಲಿ 3ಎ–00ಗು ಒಟ್ಟು 18ಎ–00ಗು ವಿಸ್ತೀರ್ಣ ಪ್ರದೇಶಕ್ಕೆ ಹೆಚ್ಚುವರಿಯಾಗಿ ಸ.ನಂ. 91 ರಲ್ಲಿ 3ಎ–00ಗು, 92 ರಲ್ಲಿ 3ಎ–00ಗು, 93 ರಲ್ಲಿ 3ಎ–00ಗು ಒಟ್ಟಾರೆ 27ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 23ಎ–16.08ಗು ಅಥವಾ 94745.70 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ)ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ :**

1) ಅರ್ಜಿದಾರರು ಸಲ್ಲಿಸಿರುವ ಅರ್ಜಿ ಸಂಖ್ಯೆ 3368, ದಿನಾಂಕ: 02/11/2017.
2) ಸರ್ಕಾರದ ಆದೇಶ ಸಂಖ್ಯೆ: ನಅಇ65ಬಿಎಂಆರ್2015, ಬೆಂಗಳೂರು ದಿನಾಂಕ: 02/03/2016 ಮತ್ತು ನಅಇ260ಬಿಎಂಆರ್2018, ಬೆಂಗಳೂರು ದಿನಾಂಕ: 05/03/2019.
3) ಈ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಐಎಪಿಎ/ಟಿಪಿ02/ಭೂಉಬ/485/2013–14/1848, ದಿನಾಂಕ: 07/09/2016 ಮತ್ತು ಬಿಐಎಪಿಎ/ಟಿಪಿ01/ಭೂಉಬ/03/2018–19/1076, ದಿನಾಂಕ: 27/08/2019.
4) ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್‌ಎನ್:ಎಸ್‌ಆರ್(ದೇ)140/2005–06 ದಿನಾಂಕ: 19/07/2005 ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಲ್‌ಸಿಸಿಪಿ100901/2020, ದಿನಾಂಕ: 12/06/2020.
5) ದಿನಾಂಕ: 24/02/2018 ರಂದು ನಡೆದ ಪ್ರಾಧಿಕಾರದ 121 ನೇ ಸಭೆಯ ವಿಷಯ ಸಂಖ್ಯೆ: 121[20(07)] ರ ಬಗ್ಗೆ ಕೈಗೊಂಡ ನಿರ್ಣಯ.
6) ಶುಲ್ಕ ಪಾವತಿಸಲು ತಿಳಿಸಿ ಅರ್ಜಿದಾರರಿಗೆ ಬರೆದಿರುವ ಈ ಪ್ರಾಧಿಕಾರದ ಸಮಸಂಖ್ಯೆಯ ಪತ್ರ ದಿನಾಂಕ: 02/04/2018.
7) ದಿನಾಂಕ: 09/05/2018 ರಂದು ರಶೀದಿ ಸಂಖ್ಯೆ: 8988 ರಂತೆ ರೂ. 18,24,500/– (ಹದಿನೆಂಟು ಲಕ್ಷದ ಇಪ್ಪತ್ತಾ ನಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.
8) ಈ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ:ಬಿಐಎಪಿಎ/ಟಿಪಿ01/ಎಲ್ಎಒ/25/2017–18/425 ದಿನಾಂಕ: 14/06/2018.
9) ಅರ್ಜಿದಾರರು ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 30/05/2020.
10) ದಿನಾಂಕ: 18/06/2020 ರಂದು ನಡೆದ ಪ್ರಾಧಿಕಾರದ 129 ನೇ ಸಭೆಯ ವಿಷಯ ಸಂಖ್ಯೆ: 129.72 ರ ನಡಾವಳಿ.
11) ಈ ಪ್ರಾಧಿಕಾರದ ಸಮಸಂಖ್ಯೆಯ ಪತ್ರ ದಿನಾಂಕ: 29/08/2020.
12) ಅರ್ಜಿದಾರರು ಪ್ರಾಧಿಕಾರದ ರಶೀದಿ ಸಂಖ್ಯೆ: 0010041, ದಿನಾಂಕ: 11/08/2020 ರಂತೆ ರೂ 23,70,700/– (ಇಪ್ಪತ್ತಾ ಮೂರು ಲಕ್ಷದ ಎಪ್ಪತ್ತು

ಸಾವಿರದ ಏಳು ನೂರು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಟಿ.ಜಯಪ್ರಕಾಶ್ ಬಿನ್ ಲೇ॥ ಟಿ.ಎ.ತಿಪ್ಪೇಗೌಡ ಇವರು ಉಲ್ಲೇಖ (1) ರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು, ಸ.ನಂ. 96 ರಲ್ಲಿ 3ಎ–00ಗು, ಸ.ನಂ. 98 ರಲ್ಲಿ 3ಎ–00ಗು, ಸ.ನಂ. 101 ರಲ್ಲಿ 3ಎ–00ಗು, ಸ.ನಂ. 102 ರಲ್ಲಿ 3ಎ–00ಗು ಒಟ್ಟು 18ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ)ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿರುತ್ತದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆ–2021 ರಂತೆ ಪ್ರಸ್ತಾಪಿತ ಜಮೀನುಗಳು ವ್ಯವಸಾಯ ಭೂಉಪಯೋಗ ವಲಯದಲ್ಲಿರುತ್ತವೆ. ಸದರಿ ಜಮೀನುಗಳು ಉಲ್ಲೇಖ (2) ರ ಸರ್ಕಾರದ ಆದೇಶದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಭೂಉಪಯೋಗ ಬದಲಾವಣೆ ಆಗಿರುತ್ತದೆ. ಯೋಜನಾ ಪ್ರಾಧಿಕಾರದಿಂದ ವಸತಿ ಉಪಯೋಗಕ್ಕೆ ಉಲ್ಲೇಖ (3) ರಲ್ಲಿ ಭೂಉಪಯೋಗ ಬದಲಾವಣೆ ಆದೇಶ ಪತ್ರ ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರದಂತೆ ಪ್ರಶ್ನಿತ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡುವ ಸಂಬಂಧ ಆದೇಶ ಹೊರಡಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ ಶಾಸನ 2015, ಬೆಂಗಳೂರು ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರ ದಿನಾಂಕ: 24/02/2018 ರಂದು ನಡೆದ ಪ್ರಾಧಿಕಾರದ 121ನೇ ಸಭೆಯ ವಿಷಯ ಸಂಖ್ಯೆ: 121[20(07)] ರ ನಡಾವಳಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ನಿರ್ಣಯಿಸಲಾಗಿದ್ದು, ಪ್ರಾಧಿಕಾರದ ಸಭೆಯ ನಡವಳಿಕೆಯ ರೀತ್ಯ ಉಲ್ಲೇಖ (6) ರ ಈ ಕಛೇರಿ ಪತ್ರದಲ್ಲಿ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸುವಂತೆ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಉಲ್ಲೇಖ (7) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದರಿಂದ, ಉಲ್ಲೇಖ (8) ರನ್ವಯ ಈ ಪ್ರಾಧಿಕಾರದಿಂದ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಅರ್ಜಿದಾರರಾದ ಶ್ರೀ ಟಿ.ಜಯಪ್ರಕಾಶ್ ಬಿನ್ ಲೇ॥ ಟಿ.ಎ.ತಿಪ್ಪೇಗೌಡ ಹಾಗೂ ಮೆ॥ ಸೆಂಚುರಿ ಸ್ಟಾರ್ ರ ಪರವಾಗಿ ಅಧಿಕೃತ ಸಹಿದಾರರು ಆದ ಶ್ರೀ ವಿವೇಕಾನಂದ ನಾಯಕ್ ಇವರುಗಳು ಉಲ್ಲೇಖ (9) ರಲ್ಲಿ ಈ ಕಛೇರಿಗೆ ಮನವಿಯನ್ನು ಸಲ್ಲಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು, ಸ.ನಂ. 96 ರಲ್ಲಿ 3ಎ–00ಗು, ಸ.ನಂ. 98 ರಲ್ಲಿ 3ಎ–00ಗು, ಸ.ನಂ. 101 ರಲ್ಲಿ 3ಎ–00ಗು, ಸ.ನಂ. 102 ರಲ್ಲಿ 3ಎ–00ಗು ಒಟ್ಟು 18ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ಈ ಹಿಂದೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಹೆಚ್ಚುವರಿಯಾಗಿ ಸ.ನಂ. 91 ರಲ್ಲಿ 3ಎ–00ಗು, 92 ರಲ್ಲಿ 3ಎ–00ಗು, 93 ರಲ್ಲಿ 3ಎ–00ಗು ಒಟ್ಟಾರೆ 27ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 23ಎ–16.08ಗು ಅಥವಾ 94745.70 ಚ.ಮೀ ವಿಸ್ತೀರ್ಣ ಪ್ರದೇಶದಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯ ಬಗ್ಗೆ ಉಲ್ಲೇಖ (10) ರಲ್ಲಿನ ದಿನಾಂಕ: 18/06/2020 ರಂದು ನಡೆದ ಪ್ರಾಧಿಕಾರದ 129 ನೇ ಸಭೆಯ ವಿಷಯ ಸಂಖ್ಯೆ: 129.72 ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಪರಿಷ್ಕೃತ ವಸತಿ ವಿನ್ಯಾಸ

ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. ಸ.ನಂ 91 ರಲ್ಲಿ 3ಎ–00ಗು, 92 ರಲ್ಲಿ 3ಎ–00ಗು, 93 ರಲ್ಲಿ 3ಎ–00, 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು, ಸ.ನಂ. 96 ರಲ್ಲಿ 3ಎ–00ಗು, ಸ.ನಂ. 98 ರಲ್ಲಿ 3ಎ–00ಗು, ಸ.ನಂ. 101 ರಲ್ಲಿ 3ಎ–00ಗು, ಸ.ನಂ. 102 ರಲ್ಲಿ 3ಎ–00ಗು ಒಟ್ಟಾರೆ 27ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 23ಎ–16.08ಗು ಅಥವಾ 94745.70 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ)ರ ಅಡಿಯಲ್ಲಿ ಅನುಮೋದನೆ ನೀಡಲು ನಿರ್ಣಯಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಉಲ್ಲೇಖ (11) ರಂತೆ ಅರ್ಜಿದಾರರಿಗೆ ನಿಗಧಿತ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುತ್ತದೆ. ಉಲ್ಲೇಖ (12) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪಾವತಿಸಿದ್ದು, ವಲಯನಿಯಮಾವಳಿಗಳ ರೀತ್ಯ ಪರಿಷ್ಕೃತ ವಸತಿ ವಿನ್ಯಾಸದ ನೀಲಿ ನಕ್ಷೆಗಳನ್ನು ಸಲ್ಲಿಸಿ, ಪರಿಷ್ಕೃತ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (10) ರ ಪ್ರಾಧಿಕಾರದ ಸಭೆಯ ನಡವಳಿಕೆಯ ರೀತ್ಯ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. ಸ.ನಂ 91 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–09ಗು, 92 ರಲ್ಲಿ 3ಎ–00ಗು, 93 ರಲ್ಲಿ 3ಎ–00, 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–36ಗು, ಸ.ನಂ. 96 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–29ಗು, ಸ.ನಂ. 98 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–39ಗು, ಸ.ನಂ. 101 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 1ಎ–17ಗು ಮತ್ತು ಸ.ನಂ. 102 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–6.08ಗು, ಒಟ್ಟಾರೆ 27ಎ–00ಗು ವಿಸ್ತೀರ್ಣ ಪ್ರದೇಶದಲ್ಲಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 23ಎ–16.08ಗು ಅಥವಾ 94745.70 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ)ರನ್ವಯ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ "ತಾತ್ಕಾಲಿಕ ಅನುಮೋದನೆ" ನೀಡಲು ಆದೇಶಿಸಲಾಗಿದೆ.

## ಆದೇಶ

**ಸಂ. ಬಿಐಎಎಪಿಎ/ಟಿಪಿ01/ಎಲ್‌ಎಒ/25/2017–18** | 1219 **ದಿನಾಂಕ:** 17 DEC 2020

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಲಿಂಗಧೀರಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. ಸ.ನಂ 91 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–09ಗು, 92 ರಲ್ಲಿ 3ಎ–00ಗು, 93 ರಲ್ಲಿ 3ಎ–00, 94 ರಲ್ಲಿ 3 ಎಕರೆ, ಸ.ನಂ. 95 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–36ಗು, ಸ.ನಂ. 96 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–29ಗು, ಸ.ನಂ. 98 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–39ಗು, ಸ.ನಂ. 101 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 1ಎ–17ಗು ಮತ್ತು ಸ.ನಂ. 102 ರಲ್ಲಿ 3ಎ–00ಗು ಪೈಕಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 2ಎ–6.08ಗು, ಒಟ್ಟಾರೆ 27ಎ–00ಗು ವಿಸ್ತೀರ್ಣ

ಪ್ರದೇಶದಲ್ಲಿ ಸ್ಥಳದಲ್ಲಿ ಭೌತಿಕವಾಗಿ ಲಭ್ಯವಿರುವ 23ಎ–16.08ಗು ಅಥವಾ 94745.70 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟಿ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಲಾ ಪ್ರದೇಶ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ **"ತಾತ್ಕಾಲಿಕ ಅನುಮೋದನೆ"** ನೀಡಲಾಗಿದೆ.

1) ಈ ಪ್ರಾಧಿಕಾರದ ಪತ್ರ ಸಂಖ್ಯೆ. ಬಿಐಎಪಿಎ/ಟಿಪಿ01/ಎಲ್‌ಎಒ/25/2017–18/425, ದಿನಾಂಕ: 14/06/2018 ರನ್ವಯ ಅನುಮೋದನೆ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಹಾಗೂ ಆದೇಶ ಪತ್ರವನ್ನು ರದ್ದುಗೊಳಿಸಲಾಗಿದೆ.

2) ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ತಾತ್ಕಾಲಿಕ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ತಾತ್ಕಾಲಿಕ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.

3) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ಪರಿಷ್ಕೃತ ಬಡಾವಣೆ ನಕ್ಷೆಗೆ ತಾತ್ಕಾಲಿಕ ಮಂಜೂರಾತಿಯನ್ನು ನೀಡಲಾಗಿದೆ.

4) ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಿರುವ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ನಾಗರೀಕ ಸೌಲಭ್ಯ ನಿವೇಶನವನ್ನು ಈ ಪ್ರಾಧಿಕಾರಕ್ಕೆ ಹಾಗೂ ಸಾರ್ವಜನಿಕ ಉಪಯೋಗದ ರಸ್ತೆಗಳನ್ನು ಹಾಗೂ ಉದ್ಯಾನವನ ಪ್ರದೇಶಗಳನ್ನು ಕುಂದಾಣ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸತಕ್ಕದ್ದು. ವಿನ್ಯಾಸದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಪ್ರದೇಶಕ್ಕೆ Fencing ಅನ್ನು ಅಳವಡಿಸಿ ಸಂರಕ್ಷಿಸತಕ್ಕದ್ದು.

5) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ರಸ್ತೆಗಳು, ಉದ್ಯಾನವನಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

6) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 02 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

7) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿರುವ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

8) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ–2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

9) ಪ್ರಸ್ತಾವಿತ ಬಡಾವಣೆಯಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಬಡಾವಣೆಯ ಮಾಲೀಕರು ಒದಗಿಸತಕ್ಕದ್ದು.

10) ಪ್ರಶ್ನಿತ ಜಮೀನಿನಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

11) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

12) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

13) ಸದರಿ ವಸತಿ ಬಡಾವಣೆಯಲ್ಲಿ ಬರುವ ನಿವೇಶನಗಳಿಗೆ ಕಡ್ಡಾಯವಾಗಿ ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

14) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

15) ಸದರಿ ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆ ಬದಿ ಚರಂಡಿ, ಕಲ್ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಪಂಚಾಯತ್ ಇಂಜಿನಿಯರಿಂಗ್ ಇಲಾಖೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

16) ಸದರಿ ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು/ಭೂಮಿಯ ಕೆಳಗಿನ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ನೀರು ಸರಬರಾಜು ಇಲಾಖೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

17) ಸದರಿ ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧಿಕರಣೆ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

18) ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

19) ಅಭಿವೃದ್ದಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

20) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

21) ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

22) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

23) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

24) ಪರಿಷ್ಕೃತ ವಸತಿ ವಿನ್ಯಾಸ ತಾತ್ಕಾಲಿಕ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸಕ್ಕೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

25) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

26) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು.

27) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಸದರಿ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ವಿನ್ಯಾಸದಲ್ಲಿನ ಉದ್ಯಾನವನ ಬಯಲು ಪ್ರದೇಶ ಹಾಗೂ ರಸ್ತೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ನಿವೇಶನವನ್ನು ಈ ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಮುಖಾಂತರ ಪ್ರತ್ಯೇಕವಾಗಿ ಪುಕ್ಕಟೆಯಾಗಿ ಹಸ್ತಾಂತರಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ Soak pit ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ನೀರು ಸರಬರಾಜು ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ ಹಾಗೂ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

17.12.2020

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಲಗತ್ತು:-
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ.

**ಇವರಿಗೆ:**
**ಶ್ರೀ ಟಿ.ಜಯಪ್ರಕಾಶ್ ಬಿನ್ ಲೇ॥ ಟಿ.ಎ.ತಿಪ್ಪೇಗೌಡ**
**ಹಾಗೂ ಮೆ॥ ಸೆಂಚುರಿ ಸ್ಟಾರ್ ರ ಪರವಾಗಿ ಅಧಿಕೃತ**
**ಸಹಿದಾರರು ಆದ ಶ್ರೀ ವಿವೇಕಾನಂದ ನಾಯಕ್,**
ನಂ. 10/1, ನೆಲಮಹಡಿ,
ಲಕ್ಷ್ಮೀನಾರಾಯಣ ಕಾಂಪ್ಲೆಕ್ಸ್,
ಪ್ಯಾಲೇಸ್ ರಸ್ತೆ, ಬೆಂಗಳೂರು-560052.